ದೂರವಾಣಿ ಸಂಖ್ಯೆ : 2419677/2419361
ಫ್ಯಾಕ್ಸ್: 0821-2419363/2419301

e-mail : registrar@uni-mysore.ac.in
www.uni-mysore.ac.in

# ಮೈಸೂರು ವಿಶ್ವವಿದ್ಯಾನಿಲಯ

ಸ್ಥಾಪನೆ : 1916

ವಿಶ್ವವಿದ್ಯಾನಿಲಯ ಕಾರ್ಯಸೌಧ,
ಕ್ರಾಫರ್ಡ್ ಭವನ, ಮೈಸೂರು-570005

ಸಂಖ್ಯೆ: ಎಸಿ7/27/2024-25

ದಿನಾಂಕ: 10-10-2024

## ಅಂತಿಮ ಅಧಿಸೂಚನೆ-1

ವಿಷಯ: ಸ್ನಾತಕೋತ್ತರ ಪ್ರೋಗ್ರಾಂಗಳಿಗೆ ಭರ್ತಿಯಾಗದೆ ಖಾಲಿ ಉಳಿದ ಸೀಟುಗಳ ಪ್ರವೇಶಾತಿ ಬಗ್ಗೆ.

ಉಲ್ಲೇಖ: 1. ಈ ಕಛೇರಿಯ ಸಮ ಸಂಖ್ಯೆ ಅಧಿಸೂಚನೆ ದಿನಾಂಕ: 31-08-2024.
2. ವಿಶ್ವವಿದ್ಯಾನಿಲಯದ ಅಧ್ಯಯನ ವಿಭಾಗಗಳ/ಸಂಯೋಜಿತ ಕಾಲೇಜುಗಳ ಅಧ್ಯಕ್ಷರು/ ಪ್ರಾಂಶುಪಾಲರುಗಳ ಮನವಿ.
3. ಅಂತಿಮ ಅಧಿಸೂಚನೆ ಸಂಖ್ಯೆ ಎಸಿ7/27/2024-25 ದಿನಾಂಕ 25.09.2024.

*******

ಉಲ್ಲೇಖಿತ(2)ರ ಮನವಿ ಮೇರೆಗೆ, ಉಲ್ಲೇಖಿತ(3)ರ ಅಂತಿಮ ಅಧಿಸೂಚನೆಯಲ್ಲಿನ ವೇಳಾಪಟ್ಟಿಯಂತೆ ಪ್ರವೇಶಾತಿ ಪ್ರಕ್ರಿಯೆ ನಡೆದ ನಂತರ ಸೀಟುಗಳು ಭರ್ತಿಯಾಗದೆ ಉಳಿದಿದ್ದಲ್ಲಿ ಈ ಕೆಳಕಂಡಂತೆ ಕ್ರಮವಹಿಸಲು ತಿಳಿಸಿದೆ.

1. Admission portalನಲ್ಲಿ Register ಆಗಿ ಪ್ರವೇಶ ಪರೀಕ್ಷೆ ಬರೆದು Admission Application ಹಾಕದೆ ಇರುವಂತಹ ವಿದ್ಯಾರ್ಥಿಗಳು ಅರ್ಜಿ ಶುಲ್ಕ ರೂ.500/-ಗಳನ್ನು Online ಮೂಲಕ ವಿಶ್ವವಿದ್ಯಾನಿಲಯದ GRA ಖಾತೆಗೆ ಪಾವತಿಸಿ ಚಲನ್‌ನೊಂದಿಗೆ ಭರ್ತಿ ಮಾಡಿದ ಅರ್ಜಿ ಮತ್ತು ಅಗತ್ಯ ದಾಖಲೆಗಳನ್ನು ಸಂಬಂಧಿಸಿದ ಅಧ್ಯಯನ ವಿಭಾಗ /ಕಾಲೇಜುಗಳಲ್ಲಿ ಸಲ್ಲಿಸುವುದು.
2. Admission portalನಲ್ಲಿ Register ಆಗದೆ ಇರುವ ವಿದ್ಯಾರ್ಥಿಗಳು ಮಾತ್ರ ರೂ.1,500/- ಗಳನ್ನು Online ಮೂಲಕ ವಿಶ್ವವಿದ್ಯಾನಿಲಯದ GRA ಖಾತೆಗೆ ಪಾವತಿಸಿ ಚಲನ್‌ನೊಂದಿಗೆ ಭರ್ತಿ ಮಾಡಿದ ಅರ್ಜಿ ಮತ್ತು ಅಗತ್ಯ ದಾಖಲೆಗಳನ್ನು ಸಂಬಂಧಿಸಿದ ಅಧ್ಯಯನ ವಿಭಾಗ /ಕಾಲೇಜುಗಳಲ್ಲಿ ಸಲ್ಲಿಸುವುದು.
3. ಈಗಾಗಲೇ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಿರುವ ಪ್ರೋಗ್ರಾಂಗಳಿಗೆ ಅವರುಗಳ ಹೆಸರುಗಳನ್ನು ಮತ್ತೆ ಪರಿಗಣಿಸಲಾಗುವುದು, ಮನಃ ಅರ್ಜಿ ಹಾಕುವ ಅವಶ್ಯಕತೆಯಿರುವುದಿಲ್ಲ. ಬೇರೆ ಪ್ರೋಗ್ರಾಂಗಳಿಗೆ ಪ್ರವೇಶ ಬಯಸಿದಲ್ಲಿ (ಅರ್ಹತೆಯಿದ್ದಲ್ಲಿ ಮಾತ್ರ) ರೂ. 500/-ಗಳನ್ನು Online ಮೂಲಕ ವಿಶ್ವವಿದ್ಯಾನಿಲಯದ GRA ಖಾತೆಗೆ ಪಾವತಿಸಿ ಚಲನ್‌ನೊಂದಿಗೆ ಭರ್ತಿ ಮಾಡಿದ ಅರ್ಜಿ ಮತ್ತು ಅಗತ್ಯ ದಾಖಲೆಗಳನ್ನು ಸಂಬಂಧಿಸಿದ ಅಧ್ಯಯನ ವಿಭಾಗ/ಕಾಲೇಜುಗಳಲ್ಲಿ ಸಲ್ಲಿಸುವುದು.

**ವಿದ್ಯಾರ್ಥಿಗಳು ಸಲ್ಲಿಸಿದ ಅರ್ಜಿಗಳನ್ನು ಪರಿಶೀಲಿಸಿ (verification),** ದಿನಾಂಕ 16-10-2024ರ ಒಳಗೆ ಅಧ್ಯಯನ ವಿಭಾಗ/ಕಾಲೇಜುಗಳ ಹಂತದಲ್ಲೇ ಮೆರಿಟ್ ಮತ್ತು ವರ್ಗವಾರು ಆಧಾರದ ಮೇಲೆ ನಿಯಮಾನುಸಾರ **ಎಲ್ಲಾ ಪ್ರವೇಶಾತಿ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಬೇಕು.**

ಮೇಲ್ಕಂಡಂತೆ ಪ್ರವೇಶಾತಿ ಪ್ರಕ್ರಿಯೆಗಳು ಪೂರ್ಣವಾದ ನಂತರ ಪ್ರವೇಶಾತಿಯು ನಿಗದಿತ ಸಂಖ್ಯಾಮಿತಿಯ ಒಳಗಿದ್ದಲ್ಲಿ ಅಥವಾ 10ಕ್ಕಿಂತ ಜಾಸ್ತಿಯಿದ್ದಲ್ಲಿ ತರಗತಿಗಳನ್ನು ವಿಶ್ವವಿದ್ಯಾನಿಲಯದ ಶೈಕ್ಷಣಿಕ ಕ್ಯಾಲೆಂಡರ್ ಅನುಸಾರ ಆರಂಭಿಸುವಂತೆ ತಿಳಿಸಲಾಗಿದೆ. ಮುಂದುವರೆದು, ಪ್ರವೇಶಾತಿ ಸಂಖ್ಯಾಮಿತಿ ಹತ್ತಕ್ಕಿಂತ(10) ಕಡಿಮೆ ಇದ್ದಲ್ಲಿ (ಭಾಷಾ ವಿಷಯವನ್ನ ಹೊರತುಪಡಿಸಿ) ವಿದ್ಯಾರ್ಥಿಗಳ ಮನವೊಲಿಸಿ ಇತರೆ ಸಮಾನಾಂತರ ಪ್ರೋಗ್ರಾಂಗಳಿಗೆ ಅಥವಾ ಅರ್ಹತೆಯಿರುವ ಪ್ರೋಗ್ರಾಂಗಳಿಗೆ ಪ್ರವೇಶಾತಿಗಳನ್ನು Shift ಮಾಡುವುದು. ನಂತರ, ಈ ವಿಷಯವನ್ನು ವಿಶ್ವವಿದ್ಯಾನಿಲಯದ ಗಮನಕ್ಕೆ ತಂದು ಅನುಮತಿ ಪಡೆಯುವುದು.

ಅರ್ಹ ಅಭ್ಯರ್ಥಿಗಳು ಪ್ರವೇಶಾತಿ ಅರ್ಜಿಯನ್ನು ವಿಶ್ವವಿದ್ಯಾನಿಲಯದ ವೆಬ್‌ಸೈಟ್ **https://www.uompgadmissions.com/** ಮೂಲಕ Download ಮಾಡಿದ ಅರ್ಜಿಯನ್ನು ಭರ್ತಿ ಮಾಡಿ ಸಂಬಂಧಿಸಿದ ಅಧ್ಯಯನ ವಿಭಾಗ/ ಕಾಲೇಜುಗಳಿಗೆ ಸಲ್ಲಿಸುವುದು.

4.10.10

ಉಪ ಕುಲಸಚಿವ(ಶೈಕ್ಷಣಿಕ)
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು-570 005

ಇವರಿಗೆ;

1. ಎಲ್ಲಾ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಅಧ್ಯಕ್ಷರುಗಳು/ನಿರ್ದೇಶಕರುಗಳು/ಸಂಯೋಜನಾಧಿಕಾರಿಗಳು/ ಮುಖ್ಯಸ್ಥರು, ಮಾನಸಗಂಗೋತ್ರಿ, ಮೈಸೂರು.
2. ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳ ಪ್ರಾಂಶುಪಾಲರುಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
3. ಸ್ನಾತಕೋತ್ತರ ಪದವಿ ಕೋರ್ಸುಗಳನ್ನು ನಡೆಸುತ್ತಿರುವ ಮೈಸೂರು ವಿಶ್ವವಿದ್ಯಾನಿಲಯದ ಸಂಯೋಜನೆಗೊಳಪಡುವ ಎಲ್ಲಾ ಸರ್ಕಾರಿ/ಖಾಸಗಿ/ಸ್ವಾಯತ್ತ ಕಾಲೇಜುಗಳ ನಿರ್ದೇಶಕರು/ ಪ್ರಾಂಶುಪಾಲರುಗಳಿಗೆ.
4. ಡಾ.ಕೆ.ರಾಮಚಂದ್ರ ಕಿಣಿ, ಅಧ್ಯಕ್ಷರು, Admission Reformation Regulation and Implementation Committee, ಜೈವಿಕ ತಂತ್ರಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು
5. ಡಾ.ನಾಗೇಂದ್ರಸ್ವಾಮಿ ಎಚ್.ಎಸ್, ಸಂಯೋಜಕರು, ಪ್ರವೇಶ ಪರೀಕ್ಷೆ ಉಪ ಸಮಿತಿ, ಗಣಕ ವಿಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು.



Scanned with ACE Scanner